ವರ್ಗಾಯಿಸುವ ಮಹತ್ತರ ಜವಾಬ್ದಾರಿ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ (ಕೆ.ಎಸ್.ಐ.ಸಿ) ಮತ್ತು ಕರ್ನಾಟಕ ಸರಕಾರದ್ದಾಗಿತ್ತು! ನಿಗಮದ ಈ ಗುರುತರ ಜವಾಬ್ದಾರಿ ಮತ್ತು ಯಶಸ್ಸನ್ನು ಮನಗಂಡ ವಿಶ್ವ ಬ್ಯಾಂಕ್ 1980 ರಲ್ಲಿ ನಿಗಮಕ್ಕೆ ಆರ್ಥಿಕ ನೆರವನ್ನು ನೀಡಿ ಮೈಸೂರಿನ ಈ ಸಾಂಸ್ಕೃತಿಕ ಸಂಪತ್ತನ್ನು ಸಂರಕ್ಷಿಸಿ ಅಭಿವೃದ್ಧಿ ಪಡಿಸುವ ಕಾರ್ಯಕ್ಕೆ ಚಾಲನೆ ನೀಡಿತು. ಈ ಉದಾತ್ತ ನೆರವಿನ ಕಾರಣ ನಿಗಮವು ರಾಜ್ಯದ ರೇಷ್ಮೆ ಉದ್ಯಮಕ್ಕೆ ಅನುವಾಗುವ ಯಂತ್ರೋಪಕರಣಗಳನ್ನು ಆಧುನಿಕರಿಸಿ ಆ ಮೂಲಕ ರಾಷ್ಟ/ ರಾಜ್ಯದ ಈ ವಿಶಿಷ್ಟ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮತ್ತು ಜಾಗತಿಕ ಮನ್ನಣೆ ಪಡೆದ ಮೈಸೂರು ರೇಷ್ಮೆಯ ಗರಿಮೆಯನ್ನು ಚಿರಂತನವಾಗಿರಿಸಲು ಸದಾ ಸಕ್ರೀಯವಾಗಿ ಕಾರ್ಯನಿರತವಾಗಿದೆ.

ಶುದ್ಧ ಮೈಸೂರು ರೇಷ್ಮೆ ಸೀರೆಗಳು ಸರಳತೆ ಮತ್ತು ಅನನ್ಯ ಸೊಗಸಿಗೆ ಹೆಸರುವಾಸಿ. 5.5 ಮೀಟರ್‌ಗಳ ಈ ಸೀರೆಯು ಸೊಗಸಾದ ವಿನ್ಯಾಸದ ದೊಡ್ಡ ಸೆರಗನ್ನು ಹೊಂದಿರುತ್ತದೆ. ಎರಡೂ ಅಂಚುಗಳಲ್ಲಿ ಕಿರಿದಾದ ಶುದ್ಧ ಚಿನ್ನದ ಜರಿಯ ಅಂಚನ್ನು ಕಾಣಬಹುದು. ಈ ಉತ್ಪನ್ನಗಳ ಕಣ್ಸೆಳೆಯುವ ವೈಭವ ಮತ್ತು ನೈಸರ್ಗಿಕ ಹೊಳಪು ನಿಜಕ್ಕೂ ಒಂದು ಅವರ್ಣನೀಯ ಅನುಭವ. ಈ ಪ್ರಸಿದ್ಧ ಸೀರೆ ಯಾಂತ್ರಿಕ ಮಗ್ಗದಲ್ಲಿ ನೇಯಲ್ಪಡುತ್ತದೆ.



ಈ ರೇಷ್ಮೆಯ ವೈಶಿಷ್ಟವೆಂದರೆ ಶುದ್ಧ ರೇಷ್ಮೆ, ಪರಿಶುದ್ಧ ಚಿನ್ನದ ಜರಿ, ನಯ, ನುಣುಪು,ಹೊಳಪು, ಕಣ್ಣಿಗೆ ಹಿತಕರ ಬಣ್ಣಗಳು, ಸರಳ ಸುಂದರ ಜರಿ ಕೆಲಸ, ಚೆಲುವಿನ ವಿನ್ಯಾಸಗಳು! ಉಟ್ಟಾಗ ಹಿತಕರವಾಗಿರುವ ಇದು ತುಂಬ ಹಗುರವಾಗಿಯೂ ಇರುತ್ತದೆ. ಬೇರೇ ಸೀರೆಗಳಂತೆ ಊಟ್ಟಾಗ ಉಬ್ಬಿ ನಿಲ್ಲದೆ ತುಂಬ ಚೆನ್ನಾಗಿ ದೇಹಕ್ಕೆ ಹೊಂದಿಕೊಳ್ಳುತ್ತದೆ. ದಿನವಿಡೀ ಉಟ್ಟುಕೊಂಡರೂ ಸ್ವಲ್ಪವೂ ಮುದ್ದೆಯಾಗುವುದಿಲ್ಲ! ಹೀಗಾಗಿ ಪ್ರತಿಯೊಬ್ಬ ಮಹಿಳೆಗೂ ತನ್ನ ಬಳಿ ಒಂದಾದರೂ ಸೊಗಸಾದ ಮೈಸೂರು ರೇಷ್ಮೆ ಸೀರೆ ಇರಲೇಬೇಕು ಎಂಬ ಬಯಕೆ. ದಶಕಗಟ್ಟಲೆ ಬಾಳಿಕೆ ಬರುವ ಈ ಸೀರೆ ತನ್ನ ಅತ್ಯುತ್ತಮ ಗುಣಮಟ್ಟಕ್ಕಾಗಿ ಕೂಡ ಹೆಸರು ಮಾಡಿದ್ದು ಭೌಗೋಳಿಕ ಗುರುತಿನ ಮಾನ್ಯತೆಯನ್ನೂ ಪಡೆದಿದೆ. ಈ ಪ್ರಸಿದ್ಧ ಸೀರೆ ಯಾಂತ್ರಿಕ ಮಗ್ಗದಲ್ಲಿ ನೇಯಲ್ಪಡುತ್ತದೆ.

ಟಿ. ನರಸಿಪುರದ ಕಾರ್ಖಾನೆಯಿಂದ ಮತ್ತು ಮುಕ್ತ ಮಾರುಕಟ್ಟೆಯಿಂದ ಖರೀದಿಸುವ ಕಚ್ಚಾ ರೇಷ್ಮೆಯ ನೂಲನ್ನು ಹಲವಾರು ರೀತಿಯ ಸಂಸ್ಕರಣೆಗೊಳಪಡಿಸಿದ ನಂತರ ಗ್ರಾಹಕರ ವಿವಿಧ ಬೇಡಿಕೆಗಳಿಗನುಗುಣವಾಗಿ ಉತ್ಕೃಷ್ಟ ಗುಣಮಟ್ಟದ ರೇಷ್ಮೆ ಸೀರೆ ಹಾಗೂ ಇನ್ನಿತರ ವಸ್ತ್ರ ವಿಶೇಷ ಗಳನ್ನು ಉತ್ಪಾದಿಸಲಾಗುತ್ತದೆ.

ಉತ್ಕೃಷ್ಟ ಗುಣಮಟ್ಟದ ವಿಭಿನ್ನ ವಿನ್ಯಾಸಗಳ ಕ್ರೇಪ್ ಡಿ ಶೈನ್, ಜಾರ್ಜೆಟ್, ಮುದ್ರಿತ ಜರಿ ರೇಷ್ಮೆ ಸೀರೆ ಮುಂತಾದವು ಮೈಸೂರು ರೇಷ್ಮೆಯನ್ನು ಗ್ರಾಹಕರ ನಂಬುಗೆ ಮತ್ತು ವಿಶ್ವಾಸಾರ್ಹತೆಯ ಉತ್ತುಂಗದಲ್ಲಿರಿಸಿದೆ. ಈ ಸೀರೆಗಳು ನೂರಕ್ಕಿಂತಲೂ ಹೆಚ್ಚಿನ ವರ್ಣ ಛಾಯೆಗಳಲ್ಲಿ ಹಾಗೂ ಚಿತ್ತಾಕರ್ಷಕವಾದ ನೂರಾರು ವಿನ್ಯಾಸಗಳ ಸಂಯೋಜನೆಗಳಲ್ಲಿ ದೊರೆಯುತ್ತವೆ.

ಅವುಗಳಲ್ಲಿ ಕೆಲವು:

- ಕಸೂತಿ ವಿನ್ಯಾಸದ ಸೀರೆ (ಎಂಬ್ರಾಯ್ಡರಿ ಡಿಸೈನ್ ಸೀರೆ)
- ದೊಡ್ಡ ಬುಟ್ಟಾಗಳ ಸೆರಗಿನ ಸೀರೆ (ಬಿಗ್ ಬುಟ್ಟಾ ಪಲ್ಲು ಸೀರೆ)
- ವೈಭವದ ಸೆರಗಿನ ಸೀರೆ (ರಿಚ್ ಪಲ್ಲು ಸೀರೆ)
- ಜವಾರ್ ಅಂಚಿನ ಸೀರೆ (ಜವಾರ್ ಬಾರ್ಡರ್ ಸೀರೆ)
- ಮಿಡಿ ಮಾವಿನ ವಿನ್ಯಾಸ್ ಸೀರೆ (ಸ್ಮಾಲ್ ಮ್ಯಾಂಗೊ ಸೀರೆ)
- ಮುದ್ರಿತ ಜರಿ ರೇಷ್ಮೆ ಸೀರೆ, (ಜರಿ ಪ್ರಿಂಟೆಡ್ ಸೀರೆ)
- ತೆಳು ಪದರದ ಸೀರೆ (ಟಿಶ್ಯು ಸೀರೆ)
- ಸಾಂಪ್ರದಾಯಿಕ ಜರಿ ಸೀರೆ (ಟ್ರೆಡಿಷನಲ್ ಜರಿ ಸೀರೆ)
- ಚೌಕಳಿ ಜರಿ ಸೀರೆ (ಚೆಕ್ಡ್ ಜರಿ ಸೀರೆ)
- ಮಾವಿನ ವಿನ್ಯಾಸದ ಅಂಚಿನ ಸೀರೆ (ಮ್ಯಾಂಗೊ ಬಾರ್ಡರ್ ಸೀರೆ)



- ಸೂರ್ಯೋದಯ ವಿನ್ಯಾಸದ ಸೀರೆ (ಸನ್‌ರೈಸ್ ಡಿಸೈನ್ ಸೀರೆ)
- ಬುಟ್ಟ ಸೆರಗಿನ ಸೀರೆ (ಬುಟ್ಟಾ ಪಲ್ಲು ಸೀರೆ)
- ಅವಳಿ ಗೆರೆಗಳ ಚೌಕಳಿ ಸೀರೆ (ಡಬಲ್ ಲೈನ್ ಚೌಕಳಿ ಸೀರೆ)

ಗ್ರಾಹಕರ ಅಭಿರುಚಿಗೆ ತಕ್ಕಂತೆ ಸೀರೆಗಳಿಗೆ ನಯನ ಮನೋಹರವಾದ ವರ್ಣಛಾಯೆಗಳನ್ನು ಮತ್ತು ವಿನ್ಯಾಸಗಳನ್ನು ರೂಪಿಸಲಾಗುತ್ತದೆ. ಈ ಸೀರೆಗಳು ಕಣ್ಣಿಗೆ ಹಿತಕರವಾದ ವಿವಿಧ ಬಣ್ಣಗಳಲ್ಲಿ ದೊರೆಯುತ್ತವೆ. ಸಾಂಪ್ರದಾಯಕ ಕೆಂಪು, ಹಸಿರು, ಹಳದಿ, ನೀಲಿ, ಕೇಸರಿ, ಕಾಫಿ ಕಂದು, ಇತ್ಯಾದಿ. ಅನುಮೊದಿತ ಸುರಕ್ಷಿತ ಬಣ್ಣಗಳನ್ನು ಮಾತ್ರ ಇಲ್ಲಿ ಉಪಯೋಗಿಸಲಾಗುತ್ತದೆ.

ನಿಗಮವು ತನ್ನ ರೇಷ್ಮೆ ಉತ್ಪಾದನೆಯ ಹಂತದಲ್ಲಿ ಉತ್ಪನ್ನಗಳ ನೈಸರ್ಗಿಕ ಹೊಳಪು ಮತ್ತು ಅಂತರಾಷ್ಟ್ರಿಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ನಿಗದಿತ ಮಾನದಂಡಗಳನ್ನು ಕಡ್ಡಾಯವಾಗಿ ಅನುಸರಿಸುತ್ತಿದೆ. ಸೀರೆ ತಯಾರಿಕೆಯ ವಿವಿಧ ಹಂತಗಳಲ್ಲಿ ಕೇವಲ ಅನುಮೋದಿತ ರಾಸಾಯನಿಕಗಳನ್ನು ಮಾತ್ರ ಅನುಮೋದಿತ ಪ್ರಮಾಣದಲ್ಲಿ ಬಳಸಲಾಗುತ್ತದೆ. ಕೆ.ಎಸ್.ಐ.ಸಿ ಸೀರೆಗಳು ಜರಿಯಿಂದ ಸಿಂಗರಿಸಲಾದ ಚಿತ್ತಾಕರ್ಷಕ ವಿನ್ಯಾಸಗಳನ್ನು ಹೊಂದಿದ್ದು ಅವುಗಳನ್ನು ಸೀರೆಯ ಅಂಚು ಮತ್ತು ಸೆರಗಿನ ಭಾಗದಲ್ಲಿ ನೇಯಲಾಗಿರುತ್ತದೆ. ಮುದ್ರಿತ ಕ್ರೇಪ್ ಸೀರೆಗಳಲ್ಲಿನ ಅನನ್ಯ ವಿನ್ಯಾಸಗಳು ಚಿನ್ನಕ್ಕೆ ಕುಂದಣವಿಟ್ಟಂತೆ ತೋರುತ್ತವೆ. ಜತೆಗೆ ಕ್ರೇಪ್‌ನ ಮೃದುತ್ವ ಮತ್ತು ಹೂಗಳ ಚಿತ್ತಾರಗಳಿಂದ ಜ್ಯಾಮಿತಿಯ ವಿನ್ಯಾಸಗಳವರೆಗಿನ ವಿವಿಧತೆಗಳು ಈ ಸೀರೆಗಳ ಸೌಂದರ್ಯವನ್ನು ಇನ್ನೂ ಹೆಚ್ಚಿಸುತ್ತವೆ. ಶುದ್ಧ ರೇಷ್ಮೆ, ಶುದ್ಧ ಚಿನ್ನದ ಜರಿಯಿಂದ ತಯಾರಿಸಲ್ಪಡುವ ಈ ಸೀರೆಗಳು ಸ್ವಾಭಾವಿಕವಾಗಿಯೇ ದುಬಾರಿಯಾಗಿರುತ್ತವೆ. ಇವುಗಳ ಬೆಲೆ 14 ಸಾವಿರ ರೂಪಾಯಿಗಳಿಂದ ಪ್ರಾರಂಭಿಸಿ 2.5 ಲಕ್ಷ ರೂ.ಗಳವರೆಗೂ ಇರುತ್ತದೆ. ಯಾವ ರೀತಿಯ ಸೀರೆ ಹಾಗೂ ವಿನ್ಯಾಸ ಎಂಬುದರ ಮೇಲೆ ಬೆಲೆ ನಿರ್ಧರಿಸಲ್ಪಡುತ್ತದೆ. ಬೆಳ್ಳಿ ಹಾಗೂ ಚಿನ್ನದ ಬೆಲೆಯನ್ನು ಆಧರಿಸಿ ಕೂಡ ಈ ಸೀರೆಗಳ ಬೆಲೆ ನಿರ್ಧಾರವಾಗುತ್ತದೆ. ನಕಲಿ ಸೀರೆಗಳ ಹಾವಳಿ ಇಲ್ಲಿಯೂ ತಪ್ಪಿಲ್ಲ!

### ಅಸಲಿ ಕೆ.ಎಸ್‌ಐ.ಸಿ ಸೀರೆಗಳನ್ನು ಗುರುತಿಸುವುದು ಹೇಗೆ?

ಆದಷ್ಟೂ ಕೆ.ಎಸ್.ಐ.ಸಿ ಮಳಿಗೆಗಳಲ್ಲೇ ಮೈಸೂರು ರೇಷ್ಮೆ ಸೀರೆಗಳನ್ನು ಖರೀದಿಸಿ. ಈ ಸೀರೆಯ ಮೇಲೆ ಕೆ.ಎಸ್.ಐ.ಸಿ ಯ ಹಾಲೊಗ್ರಾಮ್ ಕೂಡ ಇರುತ್ತದೆ. ಈ ಸೀರೆಯ ಮೂಲೆಯಲ್ಲಿ ಒಂದು ವಿಶಿಷ್ಟ ಕೋಡ್ ಅನ್ನು ಎಂಬ್ರಾಯಡರಿ ಮಾಡಿದ್ದು ಇದು ಇದ್ದರೆ ಆ ಸೀರೆ ಅಸಲಿ ಎಂದೇ ಹೇಳಬಹುದು.